
ಉದಯಕುಮಾರ್ ಹಬ್ಬು

ಕೈಕ

ಕಾದಂಬರಿ



ನಾನು ಬಡತನವನ್ನು ಅನುಭವಿಸಿದರೂ ಹೊಟ್ಟೆಗೆ ಹೇಗಾದರೂ ಅನ್ನ ಸಿಗುತ್ತಿತ್ತು. ನನ್ನ ಜಾತಕ ಮಾಡಿದ ಪುರೋಹಿತರೂ ಹೇಳಿದ್ದರಂತೆ. ಇವನು ಹಸಿವಿನಿಂದ ಸಾಯುವುದಿಲ್ಲ. ಸತ್ತರೆ ಯುದ್ಧದಲ್ಲಿ, ಮೋಸದಿಂದ; ವೈರಿಗಳ ಮೋಸದಿಂದ ಸಾಯುತ್ತಾನೆ..' ಅದಕ್ಕೆ ಹಲವಾರು ಕಂಟಕದೋಷಪರಿಹಾರಾರ್ಥ ಹೋಮ, ಹವನಗಳನ್ನು ನನ್ನ ಚಿಕ್ಕಪ್ಪ ಮಾಡಿಸಿದ. ಅವನಿಗೂ ನನ್ನ ತೀಕ್ಷ್ಣ ಬುದ್ಧಿಯ ಬಗ್ಗೆ ಅಭಿಮಾನ. ಹಾಗಾಗಿ ನನಗೆ ಅಗ್ನ್ಯಸ್ತ್ರವನ್ನು ಕೊಡಮಾಡಿದ. ವೇದಾಭ್ಯಾಸವನ್ನು ತಂದೆ ಭರದ್ವಾಜರು ಮಾಡಿಸಿದ್ದರು. ಆದರೆ ಈ ಅಗ್ನ್ಯಸ್ತ್ರ ಇದುವೇ ವಿಶೇಷ. ನಾನು ಯುದ್ಧ ಮಾಡುವೆ, ಮುಂದೆ ಪುತ್ತು ಈ ಶಸ್ತ್ರಾಸ್ತ್ರ ವಿದ್ಯೆಯೇ ನನ್ನನ್ನು ಒಂದು ಕಡೆ ನಲಿಸುವಂತೆ, ಹೆಸರು ಪಡೆಯುವಂತೆ ಮಾಡುತ್ತದೆಂದು ಯಾರು ಕನಸು ಕಂಡಿದ್ದರು? ಹಾಗೇ ಅಯಿತೂ ಕೂಡಾ. ಆದರೆ ಭವಿಷ್ಯತ್ತನ್ನು ಕಂಡವರಾರು?

ತ್ರಿಕ

ಕಾದಂಬರಿ

ಉದಯ ಕುಮಾರ್ ಹಬ್ಬು

TYAKTA

A Novel

Writter by

Udaya Kumar Habbu

Abhishek House

Bittulu, Kinnigoli - 574 150, Dakshina Kannada

Mob : 9902761720

ಮುನ್ನುಡಿ

ಮಹಾಭಾರತವೆಂದರೆ ಅದು ಮಹಾಸಾಗರ. ಯಾರು ಎಷ್ಟು ಮೊಗೆದುಕೊಂಡರೂ ಮೂಲವು ಬತ್ತುವುದಿಲ್ಲ. ಪೂರ್ಣಮದಃ ಪೂರ್ಣಮಿದಂ... ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ ಅನ್ನುವ ಹಾಗೆ ಅನಂತದಿಂದ ಎತ್ತಿಕೊಂಡಿದ್ದು ಅನಂತವಾಗುತ್ತದೆ; ಆದರೆ ಮೂಲವು ಮುಕ್ಕಾಗುವುದಿಲ್ಲ. ಶ್ರೀ ಉದಯಕುಮಾರ ಹಬ್ಬು ಅವರು ಮಹಾಭಾರತದ ಮುಖ್ಯ ಪಾತ್ರಗಳಲ್ಲೊಂದಾದ ದ್ರೋಣಾಚಾರ್ಯರನ್ನು ಕೇಂದ್ರವಾಗಿಟ್ಟುಕೊಂಡು ಇಡೀ ಮಹಾಭಾರತವನ್ನು ಸೀಮಿತ ಪುಟಗಳಲ್ಲಿ ಅಡಕಗೊಳಿಸಿ 'ತ್ಯಕ್ತ' ಅನ್ನುವ ಕಾದಂಬರಿಯನ್ನು ಸೊಗಸಾಗಿ ರಚಿಸಿ ಕನ್ನಡ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿದ್ದಾರೆ.

ಧರ್ಮ ಸೂಕ್ಷ್ಮದ ಎಳೆಗಳಲ್ಲಿ ಬಂಧಿಸಲ್ಪಟ್ಟ ಸೂಕ್ಷ್ಮ ಮನಸ್ಕರಾದ ಭೀಷ್ಮ, ದ್ರೋಣ, ಕರ್ಣರು ವಿಪುಲ ದ್ರವ್ಯಗಳನ್ನೊದಗಿಸುವ ಪಾತ್ರಗಳು. ಈ 'ತ್ಯಕ್ತ' ದಲ್ಲಿ ಶ್ರೀ ಉದಯಕುಮಾರ ಹಬ್ಬು ಅವರು ದ್ರೋಣನ ಅಂತರಂಗವನ್ನು ಎಳೆ ಎಳೆಯಾಗಿ ಬಿಡಿಸಿ ಓದುಗರ ಮುಂದೆ ಮನೋಜ್ಞವಾಗಿ ಇಟ್ಟಿದ್ದಾರೆ. ಬಡತನಕ್ಕೆ ಯಾವ ಜಾತಿ? ಅದು ಬಡವರ ಜಾತಿ. ಈ ಲೇಖಕರ ಕಥಾನಾಯಕನು ತನ್ನ ವರ್ಣಧರ್ಮವನ್ನು ಮೀರಿದ ವೃತ್ತಿಯಿಂದಾಗಿ ಮೂಲ ವರ್ಣದವರ ತಿರಸ್ಕಾರಕ್ಕೆ ತುತ್ತಾಗುತ್ತಾನೆ. ವೃತ್ತಿಮೂಲದ ಧರ್ಮದವರಿಂದ ಅನುಮಾನದಿಂದದಿಂದಲೇ ನೋಡಲ್ಪಡುತ್ತಾನೆ. ಬ್ರಾಹ್ಮಣನ ಕ್ಷಮಾಶೀಲತೆ ಮತ್ತು ಕ್ಷತ್ರಿಯರ ಛಲಗಳೆಂಬ ವಿರುದ್ಧ ಭಾವಗಳ ನಡುವೆ ನಲುಗುತ್ತಾ ಹೋಗುತ್ತಾನೆ. ಅವನ ಮನಸ್ಸಿನ ತೊಳಲಾಟವನ್ನು ಓದುಗರಿಗೆ ವಿವರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಅವನಲ್ಲಿ ಅಂತರ್ಗತವಾದ ಸತ್ವಗುಣದ ಮೇಲೆ ರಜೋಗುಣವು ಸವಾರಿ ಮಾಡಲು ಯತ್ನಿಸುವಿಕೆ, ಆ ರಜೋಗುಣವನ್ನು ಪ್ರತಿರೋಧಿಸಲು ಒಳಗಿನ ಸತ್ವಗುಣವು ಆಗಾಗ ಶಕ್ತಿಯನ್ನು ಕೂಡಿಸಿಕೊಂಡು ಮೇಲೇಳುವ ಬಗೆಗಳನ್ನು ಲೇಖಕರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಲೇಖಕರು ದ್ರೋಣನನ್ನು ವಿಪರೀತವಾಗಿ ಹಚ್ಚಿಕೊಂಡರುವಂತೆ ಕಾಣುತ್ತದೆ.

ಇಂತಹ ಉತ್ಕಟತೆ ಉತ್ತಮ ಸಾಹಿತ್ಯದ ಹುಟ್ಟಿಗೆ ಕಾರಣ. ಹಾಗಾಗಿ 'ತ್ಯಕ್ತ' ದ ನಾಯಕ ಸೋಲುತ್ತಾನೆ. ನಿರೂಪಣಾ ಶೈಲಿಯಿಂದ ಲೇಖಕರು ಗೆಲ್ಲುತ್ತಾರೆ. ಶ್ರೀ ಉದಯಕುಮಾರ ಹಬ್ಬು ಅವರು ತಮ್ಮ ಕೃತಿಯಲ್ಲಿ ದ್ರೋಣರನ್ನು ಮೇಲೆತ್ತಲು ಪ್ರಯತ್ನಿಸಿರುವ ಹಾಗೆ ತಾವೂ ಸಾಹಿತ್ಯಿಕವಾಗಿ ಮೇಲೇರಿದ್ದಾರೆ.

ಮೂಲಭಾರತದಲ್ಲಿ ಅಷ್ಟಾಗಿ ಪ್ರಕಟಗೊಳ್ಳದ ಕೃಪಿಯ ಪಾತ್ರವನ್ನು ಶ್ರೀಯುತರು ಅತ್ಯಂತ ಕಾಳಜಿಯಿಂದ ಕೆಲವೇ ದೃಶ್ಯಗಳಲ್ಲಿ ನಿರೂಪಿಸಿದ್ದಾರೆ. ಹೆಣ್ಣಿನ ಮನೋಲೋಕವನ್ನು ಪ್ರವೇಶಿಸಿ ಅಧ್ಯಯನ ಮಾಡಬಲ್ಲವರು ವಿರಳ. ಇಲ್ಲಿ ಲೇಖಕರು ಅತ್ಯಂತ ಸುಲಭವಾಗಿ ಗೆಲುವು ಸಾಧಿಸಿದ್ದಾರೆ. ಲೇಖಕರು ತಮ್ಮ ತೊಡಗಿಸಿ ಕೊಳ್ಳುವಿಕೆಯಿಂದ ಹಾಗೂ ನಿರೂಪಣಾ ಶೈಲಿಯಿಂದ ಗೆಲ್ಲುತ್ತಾರೆ.

ಅಶ್ವತ್ಥಾಮನನ್ನು ಪ್ರತಿಮೆಯಾಗಿಸಿಕೊಂಡು ಮನುಷ್ಯನ ಸಹಜ ದುರ್ಬಲ ಅಸಂತೃಪ್ತಿ, ಅಸೂಯೆಗಳಂತಹ ಗುಣಗಳನ್ನು ಲೇಖಕರು ಉತ್ಪ್ರೇಕ್ಷೆಯಿಲ್ಲದೆ ನಿರೂಪಿಸಿರುವ ಶೈಲಿ ಆಕರ್ಷಕವಾಗಿದೆ. ಕೆಲವೆಡೆ ಫ್ಲಾಶ್ ಬ್ಯಾಕ್ ತಂತ್ರಗಳ ಮೂಲಕ ಘಟನೆಗಳನ್ನು ತೆರೆಯುತ್ತ ಹೋಗಿರುವುದು ಕತೆಯ ಮೌಲ್ಯವನ್ನು ಹೆಚ್ಚಿಸಿದೆ. ಮೂಲ ಭಾರತಕ್ಕಿಂತ ವಿಭಿನ್ನವಾದ ರೀತಿಯ ಚಿಂತನೆ, ಸನ್ನಿವೇಶಗಳು ಆಗಾಗ್ಗೆ ಇಣಿಕಿ ನೋಡುವುದು ಲೇಖಕನ ಅನ್ವೇಷಣೆಯ ತುಮುಲವನ್ನು ತೋರಿಸುತ್ತದೆ. ಪ್ರಕೃತಿ ಸೌಂದರ್ಯದ ನಾಡಿನಲ್ಲಿ ಜನಿಸಿರುವ ಇವರು ತಮ್ಮ ಕೃತಿಯಲ್ಲೂ ನಿಸರ್ಗವನ್ನು ವರ್ಣಿಸಿರುವ ರೀತಿಯು ಓದುಗನನ್ನು ಮುದಗೊಳಿಸುವಂತಿದೆ. ಶ್ರೀಯುತರು ಕೆಲವೆಡೆ ಅತಿ ಸರಳ ಭಾಷೆಯನ್ನು ಬಳಸಿದ್ದರೆ ಕೆಲವೆಡೆ ತಮ್ಮ ವಾಗ್ವೈಭವವನ್ನು ತೆರೆದು ತೋರಿಸಲು ಪ್ರಯತ್ನಿಸಿದ್ದಾರೆ. ಈ ಅಂಶವು ಕೃತಿಯ ಧನಾತ್ಮಕ ಅಂಶವಾಗಿದೆ.

ಹಾಗೆಯೇ ಈ ಕೃತಿಗೆ ಕೆಲವು ಮಿತಿಗಳಿವೆ. ಕಥಾನಾಯಕನೆ ನಿರೂಪಕನಾಗಿರುವುದು ಈ ಕಾದಂಬರಿಯ ಅಭಿವ್ಯಕ್ತಿಯಲ್ಲಿ ಕಾಣುವ ಹಿನ್ನಡೆ. ಲೇಖಕನು ನಿರೂಪಕನಾದರೆ ಅವನ ವಿವರಣಾ ಸ್ವಾತಂತ್ರ್ಯವು ಅಸೀಮವಾಗಿರುತ್ತದೆ. ಕೆಲವು ಬಗೆಯ ಕೃತಿಗಳಲ್ಲಿ ಲೇಖಕನ ಬದಲು ಕಥೆಯ ಪಾತ್ರವೊಂದು ನಿರಪೇಕ್ಷವಾಗಿ ನಿಂತು ನಾಯಕನ ಸುತ್ತ ಕಥೆಯನ್ನು ಹೆಣೆಯುತ್ತ ಹೋದರೆ ಆಗ ಇನ್ನೊಂದು ಬಗೆಯ ವಿಶಿಷ್ಟತೆ ಮೂಡಿಬರುವ ಸಾಧ್ಯತೆಯಿರುತ್ತದೆ. ನಾಯಕನೆ ನಿರೂಪಕನಾದರೆ ಅಗತ್ಯಕ್ಕಿಂತ ಹೆಚ್ಚು ಆವೇಶ, ಆತ್ಮ ಪ್ರತ್ಯಯ, ಸ್ವಾನುಕಂಪಗಳು ಮೇಲೇಳುವ ಅಪಾಯವಿರುತ್ತದೆ. ಅದನ್ನು ನಿರೀಕ್ಷಿಸಿಯೆ ಶ್ರೀ ಉದಯಕುಮಾರ ಹಬ್ಬು ಅವರು ಈ ಬಗೆಯ ಅಸಾಧ್ಯ ಕಷ್ಟಸಾಧನೆಗೆ ಹೊರಟಿದ್ದಾರೆ. ಆದರೆ ಆಳವಾದ ಅಧ್ಯಯನದಿಂದ ಈ ಕೃತಿಯನ್ನು ರಚಿಸಿರುವುದು ಓದುವಾಗ ತಿಳಿಯುತ್ತದೆ. ದ್ರೋಣರ ಆತ್ಮಾವಲೋಕನವನ್ನು ನೆಪವಾಗಿಟ್ಟುಕೊಂಡು ಲೇಖಕರು ಆಗಾಗ್ಗೆ ತತ್ತ್ವಶೋಧನ ಕ್ಕಿಳಿದಿರುವುದು ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಕಾದಂಬರಿಯು ಅತ್ಯಂತ ಮನಮುಟ್ಟುವಂತಿದೆ. ಇವರ ಲೇಖನಿಯಿಂದ 'ತ್ಯಕ್ತ'ದಂತಹ ಮತ್ತಷ್ಟು ಕೃತಿಗಳು ಹೊರಬರಲೆಂದು ನಾನು ಆಶಿಸುತ್ತೇನೆ.

30–2–2014

ಕೆ. ಅನಂತರಾಮು, ಬೆಂಗಳೂರು